# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 580
ಸದಸ್ಯರ ಹೆಸರು: ಶ್ರೀ.ಎನ್.ರವಿಕುಮಾರ್
ಉತ್ತರಿಸುವ ದಿನಾಂಕ: 10-03-2020
ಉತ್ತರಿಸುವವರು: ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

| | ಪ್ರಶ್ನೆಗಳು | ಉತ್ತರ |
|---|---|---|
| ಅ | ರೇಷ್ಮೋದ್ಯಮ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ಸಹಾಯಧನವಾಗಿ ರೂ.15.54 ಕೋಟಿಯನ್ನು ಸಂಸ್ಥೆಯ ಕೋರಿಕೆಯೇ ಇಲ್ಲದೆ ದಿನಾಂಕ: 30.03.2015 ರಂದು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು<br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೇಷ್ಮೆ ಇಲಾಖೆಗೆ ಅನುಮೋದನೆಯಾಗಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ತೋಇ 113 ರೇಕೃವಿ 2014 ದಿನಾಂಕ 30-03-2015 ರಂತೆ ರೂ.15.54 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br>ಸದರಿ ಆದೇಶದಲ್ಲಿ ಈ ಅನುದಾನವನ್ನು ಸೆಳೆದು ನಿರ್ದೇಶಕರು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಇವರ ಲೆಕ್ಕಕ್ಕೆ ವರ್ಗಾಯಿಸಲು ಆದೇಶಿಸಲಾಗಿದೆ. ಅದರಂತೆ ಸಂಸ್ಥೆಯ ಲೆಕ್ಕಕ್ಕೆ ಜಮೆ ಮಾಡಲಾಗಿದೆ. |
| ಆ | ರೇಷ್ಮೋದ್ಯಮ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ಸಹಾಯಧನವಾಗಿ ನೀಡಿದ ರೂ.15.54ಕೋಟಿಯನ್ನು ಯಾವ ಉದ್ದೇಶಕ್ಕಾಗಿ ಹಾಗೂ ಯಾವಾಗ ಬಳಸಲಾಗಿದೆ; | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೇಷ್ಮೆ ಇಲಾಖೆಗೆ ಅನುಮೋದನೆಯಾಗಿರುವ ಉದ್ದೇಶಿತ ಕಾರ್ಯಕ್ರಮಗಳಾದ ರೇಷ್ಮೆ ಗೂಡು ಮಾರುಕಟ್ಟೆಗಳ ಉನ್ನತೀಕರಣ, ಬಿತ್ತನೆ ಗೂಡು ಮಾರುಕಟ್ಟೆಗಳ್ಳ ಗಣಕೀಕರಣ, ರೇಷ್ಮೆ ಇಲಾಖೆಯ ಸಮಗ್ರ ಗಣಕೀಕರಣ, ಕಾರ್ಯಕ್ರಮಗಳಿಗೆ ವೆಚ್ಚವನ್ನು ಭರಿಸಲಾಗುತ್ತಿದೆ. |
| ಇ | ಈ ಮೊತ್ತವನ್ನು ಕೇಂದ್ರ ಸರ್ಕಾರದ ಕೃಷಿ ವಿಕಾಸ ಯೋಜನೆಯ ಅನುಷ್ಠಾನಕ್ಕೆ ಬಳಸದಿರಲು ಕಾರಣವೇನು; | ಸದರಿ ಮೊತ್ತವನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೇಷ್ಮೆ ಇಲಾಖೆಗೆ ಅನುಮೋದನೆಯಾಗಿರುವ ಉದ್ದೇಶಿತ ಕಾರ್ಯಕ್ರಮಗಳಿಗಾಗಿಯೇ ಬಳಸಲಾಗುತ್ತಿದೆ. |
| ಈ | ಅನಗತ್ಯವಾಗಿ ಸರ್ಕಾರದಿಂದ ಹಣ ಪಡೆದು ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡುವ ಮೂಲಕ ಬಡ್ಡಿಯನ್ನು ಸ್ವಂತ ಉಪಯೋಗಕ್ಕೆ ಬಳಸಿ, ಅವ್ಯವಹಾರ ನಡೆಸಿದ ಅಧಿಕಾರಿಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ? | ಸದರಿ ಮೊತ್ತದಿಂದ ಸಂಗ್ರಹವಾಗಿರುವ ಬಡ್ಡಿಯನ್ನು ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ. ಜಮೆ ಮಾಡಲಾದ ಮೊತ್ತದಿಂದ ಸಂಗ್ರಹವಾಗಿರುವ ಬಡ್ಡಿಯನ್ನು ಕೃಷಿ ಆಯುಕ್ತರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರರವರ ಪತ್ರ ಸಂಖ್ಯೆ:RKVY/ಅನುದಾನದ ವಿವರ/2020-21 ದಿ:13.01.2020 ರಂತೆ ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಮಂತ್ರಾಲಯ, ನವದೆಹಲಿರವರಿಗೆ ಪಾವತಿಸಲು ಕ್ರಮವಹಿಸಲಾಗುತ್ತಿದೆ. |

**ರೇಷ್ಮೆ 29 ರೇಕೃವಿ 2020**

(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು